# ವಿಶ್ವಾಸಮತಕ್ಕೆ ಸಮಯ ಕೇಳಿದ ಸಿಎಂ

## ಹಿರಿಯ ಸದಸ್ಯರು ಚರ್ಚಿಸಬೇಕಿದೆ | ಮಂಗಳವಾರ ಸುಪ್ರೀಂನಲ್ಲಿ ವಿಚಾರಣೆ

ವಿಶ್ವಾಸಮತ ಯಾಚನೆಗೆ ತಾವು ಸಿದ್ಧರಿದ್ದು, ಸ್ವಲ್ಪ ಸಮಯಾವಕಾಶ ನೀಡುವಂತೆ ಸಿಎಂ ಎಚ್.ಡಿ.ಕುಮಾರಸ್ವಾಮಿ ಅವರು ವಿಧಾನಸಭಾಧ್ಯಕ್ಷರಿಗೆ ಮನವಿ ಮಾಡಿದರು.

"ಸದನದಲ್ಲಿ ವಿಶ್ವಾಸಮತ ನಿರ್ಣಯ ಮಂಡನೆಗೆ ತಯಾರಿದ್ದೇನೆ. ಆದರೆ, ಸಿಎಲ್‌ಪಿ ನಾಯಕರಾದ ಸಿದ್ದರಾಮಯ್ಯ ಅವರು ಪ್ರಸ್ತಾವನೆ ಮೇಲೆ ಮಾತನಾಡಬೇಕಿದ್ದು, ನನಗೂ ಮಾತನಾಡಲು ಅವಕಾಶ ಬೇಕು. ಹೀಗಾಗಿ, ಹೆಚ್ಚಿನ ಕಾಲಾವಕಾಶ ಬೇಕು" ಎಂದು ಸಿಎಂ ಕೋರಿದರು.

"ಸೋಮವಾರ ವಿಶ್ವಾಸಮತ ಪ್ರಕ್ರಿಯೆ ಮುಗಿಸಲು ಬಯಸಲಾಗಿತ್ತು. ಆದರೆ, ಇನ್ನೂ ಬಹಳಷ್ಟು ಸದಸ್ಯರು ಚರ್ಚೆಯಲ್ಲಿ ಭಾಗವಹಿಸಬೇಕಿದೆ. ಸುಪ್ರೀಂಕೋರ್ಟ್‌ನಲ್ಲಿ ಮಂಗಳವಾರ ಅರ್ಜಿ ವಿಚಾರಣೆಗೆ ಬರುತ್ತಿದೆ" ಎಂದರು. ಸಿಎಂ ಬೇಡಿಕೆಯನ್ನು ಕಾಂಗ್ರೆಸ್ ಹಿರಿಯ ಸದಸ್ಯ ಎಚ್.ಕೆ.ಪಾಟೀಲ್, ಸಚಿವ ಕೆ.ಜೆ.ಜಾರ್ಜ್ ಅವರೂ ಸಮರ್ಥಿಸಿ, ತಾವೂ ಚರ್ಚೆಯಲ್ಲಿ ಪಾಲ್ಗೊಳ್ಳಲು ಸಮಯಾವಕಾಶ ಬೇಕಿದೆ ಎಂದು ಸ್ಪೀಕರ್‌ಗೆ ಕೋರಿಕೆ ಸಲ್ಲಿಸಿದರು. ಆಡಳಿತ ಪಕ್ಷದ ಸದಸ್ಯರು ಸದನವನ್ನು ಮಂಗಳವಾರಕ್ಕೆ ಮುಂದೂಡುವಂತೆ ಆಗ್ರಹಿಸಿದರು.

ಈ ಹಂತದಲ್ಲಿ ಸರಕಾರದ ಕಾಲಾವಕಾಶದ ಬೇಡಿಕೆಯನ್ನು ಬಿಜೆಪಿಯ ಮಾಧುಸ್ವಾಮಿ ಆಕ್ಷೇಪಿಸಿದರು. "ಸೋಮವಾರ ಬಹುಮತ ಸಾಬೀತು ಪ್ರಕ್ರಿಯೆ ಪೂರ್ಣಗೊಳಿಸುವುದಾಗಿ ಶುಕ್ರವಾರ ಸದನದಲ್ಲೇ ನಡೆದುಕೊಂಡಿದ್ದು, ಮಾತಿನಂತೆ ನಡೆದುಕೊಳ್ಳಿ" ಎಂದು ಆಗ್ರಹಿಸಿದರು. ಇದರಿಂದ ಕೆರಳಿದ ಸಿಎಂ "ಅತೃಪ್ತ ಶಾಸಕರ ರಾಜೀನಾಮೆ ವಿಚಾರದಲ್ಲಿ ನಮ್ಮದೇನೂ ಪಾತ್ರ ಇಲ್ಲ ಎಂದು ಹೇಳುತ್ತಿರುವ ನಿಮಗೆ ನಾಚಿಕೆಯಾಗುವುದಿಲ್ಲವೇ? ಈ ಎಲ್ಲ ವಿಚಾರಗಳು ಸಾರ್ವಜನಿಕವಾಗಿ ಅನಾವರಣವಾಗಲಿ ಎಂಬ ಕಾರಣಕ್ಕೇ ಸಮಯಾವಕಾಶ ಕೇಳಲಾಗುತ್ತಿದೆ" ಎಂದು ಮಾಧುಸ್ವಾಮಿ ಅವರ ವಿರುದ್ಧ ಹರಿಹಾಯ್ದರು.



ವಿಶ್ವಾಸಮತಯಾಚನೆಗೆ ಕಾಲಾವಕಾಶ ಕೇಳಿ ಸದನದ ಬಾವಿಗಿಳಿದು ಪ್ರತಿಭಟಿಸಿದ ಆಡಳಿತ ಪಕ್ಷ

## ಝೀರೋ ಟ್ರಾಫಿಕ್ ವ್ಯವಸ್ಥೆ ಮಾಡಿಲ್ಲ

ಬೆಂಗಳೂರು: ಸುಪ್ರೀಂಕೋರ್ಟ್ ಸೂಚನೆಯಂತೆ ಸ್ಪೀಕರ್ ಭೇಟಿಯಾಗಲು ಮುಂಬಯಿನಿಂದ ಬಂದಿದ್ದ ಅತೃಪ್ತ ಶಾಸಕರಿಗೆ ಝೀರೊ ಟ್ರಾಫಿಕ್ ವ್ಯವಸ್ಥೆ ಮಾಡಿರಲಿಲ್ಲವೆಂದು ಗೃಹ ಸಚಿವ ಎಂ.ಬಿ.ಪಾಟೀಲ್ ವಿಧಾನಸಭೆಗೆ ಸ್ಪಷ್ಟಪಡಿಸಿದ್ದಾರೆ. ಶಿಷ್ಟಾಚಾರದಲ್ಲಿ ಈ ಅವಕಾಶವಿದೆಯಾ ಎಂದು ಜೆಡಿಎಸ್ ಶಾಸಕ ಎ.ಟಿ.ರಾಮಸ್ವಾಮಿ ಗಮನ ಸೆಳೆದಿದ್ದರು. ಸ್ಪೀಕರ್ ರಮೇಶ್ ಕುಮಾರ್ ಅವರೂ ಸಮಜಾಯಿಷಿ ಬಯಸಿದರು. ಈ ಶಾಸಕರಿಗೆ ಈ ಝೀರೊ ಟ್ರಾಫಿಕ್ ನೀಡಿದ್ದು ಹೇಗೆ? ಆದೇಶಿಸಿದವರು ಯಾರೆಂದು ಸ್ಪೀಕರ್ ಗರಂ ಆಗಿಯೇ ಕೇಳಿದರು. ರಾಜ್ಯಪಾಲರ ಸೂಚನೆ ಅನುಸಾರ ಡಿಜಿ ಅವರು ಅತೃಪ್ತರಿಗೆ ರಕ್ಷಣೆ ಕೊಡಿಸಿದ್ದಾರೆ. ಝೀರೊ ಟ್ರಾಫಿಕ್ ನೀಡಿಲ್ಲವೆಂದು ಅಧಿಕಾರಿಗಳು ತಿಳಿಸಿದ್ದಾರೆ ಎಂದು ಗೃಹ ಸಚಿವರು ಹೇಳಿದರು.

560018 (Ph:080-40877666, Fax:080-40877695/696) and printed ...
... of news under PRB Act. ...